# ಗುರುವಲ್ಲದ ಗುರು

ಪ್ರಾಯಶಃ ೧೯೯೨ರ ಸುಮಾರಿಗೆ ಅಜ್ಜನವರು ಪುತ್ತೂರು ಬಸ್ ಸ್ಟಾಂಡಿನ ಸಮೀಪದಲ್ಲಿಯೇ, ಅವರ ಅಭಿಮಾನಿಗಳ ಮನೆಯಲ್ಲಿ ತಂಗುತ್ತಿದ್ದರು.

ಆ ವೇಳೆಗಾಗಲೇ ಅಜ್ಜನವರ ಬಗ್ಗೆ ಸಾಕಷ್ಟು ಕೇಳಿದ ನನಗೆ ಅವರನ್ನು ಭೇಟಿಯಾಗಬೇಕೆಂಬ ಕಳಕಳಿ ಉದಯಿಸಿತು. ಅನೇಕ ಮಂದಿ ಸಾಧು ಸತ್ಪುರುಷರ ದರ್ಶನ ಪಡೆದ ನನಗೆ ಆಧ್ಯಾತ್ಮಿಕ ಅನುಭೂತಿ ಪಡೆದ ಈ ಅವಧೂತ ವ್ಯಕ್ತಿತ್ವದ ಅಜ್ಜನವರ ದರ್ಶನ ಸ್ಪರ್ಶನ ಸಂಭಾಷಣೆ ನಿಜಕ್ಕೂ ಚೇತೋಹಾರಿ.

ಅಜ್ಜನವರ ಸನಿಹದಲ್ಲಿ ಮಾತು ಮೌನವಾಗುತ್ತದೆ. ಮನಸ್ಸು ಅಂತರ್ಮುಖವಾಗುತ್ತದೆ. ಏನೋ ಒಂದು ಅದ್ವಿತೀಯ ಶಾಂತಿ–ಆನಂದದ ಅನುಭವ ಈ ಮಹಾತ್ಮರ ದಿವ್ಯಸನ್ನಿಧಿಯಲ್ಲಿ ಅನೇಕರ ಗಮನಕ್ಕೆ ಬಂದಿದೆ. ಸಂಭಾಷಣೆಯ ಸತ್ಸಂಗಗಳಲ್ಲಿ ಅವರು ನೀಡುತ್ತಿದ್ದ ವಿಚಾರಗಳು ಸಾಧಕರ ಸಾಧನೆಗೆ ಸ್ಪಷ್ಟವಾದ ಮಾರ್ಗದರ್ಶನ ನೀಡುವ ದಾರಿದೀಪಗಳಾಗಿದ್ದವು."ಅಸತೋಮಾ ಸದ್ಗಮಯ .." ಎನ್ನುವ ಉಪನಿಷತ್ತಿನ ಮಾತನ್ನು ಅಜ್ಜ ಸರಳವಾಗಿ, ಅನುಭವಪೂರ್ಣವಾಗಿ ನಮಗೆ ತಿಳಿಸುತ್ತಿದ್ದರು. ಇರುವುದು ಸದ್ವಸ್ತು ಒಂದು ಮಾತ್ರ. ಅಸತ್ ಎನ್ನುವುದೇ ಇಲ್ಲ. ತಮಸ್ಸು–ಕತ್ತಲೆ ಎನ್ನುವುದು ಬೆಳಕಿನ ಅಭಾವ. ಇರುವುದು ಬೆಳಕೊಂದೇ. ಪ್ರತಿಯೊಬ್ಬರೂ ಅಮೃತ ಸ್ವರೂಪಿಗಳು. ಇವೆಲ್ಲಾ ಶಬ್ದಜಾಲಗಳಲ್ಲ. ಬೂಟಾಟಿಕೆಯ ಮಾತುಗಳಲ್ಲ. ವಾಗಾಡಂಬರಗಳಲ್ಲ. ಅನುಭವದ ಅಣಿಮುತ್ತುಗಳು. ಪ್ರತಿಯೊಬ್ಬರೂ ಈ ಅನುಭವ ಪಡೆಯಬಹುದು ಎಂಬ ವಿಶ್ವಾಸವನ್ನು "ಅಜ್ಜ" ತಮ್ಮ ಬಳಿಗೆ ಬಂದವರಲ್ಲಿ ಮೂಡಿಸುತ್ತಿದ್ದರು.

ಅಜ್ಜನವರು ಪಡೆದ ಜ್ಞಾನದ ಬೆಳಕನ್ನು ನಾವು ಪಡೆಯಲೇ ಬೇಕು. ಅದನ್ನು ಪಡೆಯಲು ಪ್ರೇರಣೆ ನೀಡುವುದೇ ಅವರ ಉದ್ದೇಶ. ಸಾಧನೆ ಮಾಡದವರ ಮುಂದೆ ಮಾತು ವ್ಯರ್ಥ ಎನ್ನುತ್ತಿದ್ದರು ಅಜ್ಜ. ಒಂದು ಬಾರಿ ವಿಭಿನ್ನ ರುಚಿಯ ಅನೇಕ ಸ್ನೇಹಿತರೊಂದಿಗೆ ನಾನು ಅಜ್ಜನವರ ಸನ್ನಿಧಿಗೆ ಹೋಗಿದ್ದೆ. "ಅಜ್ಜ ಏನಾದರೂ ಹಿತವಚನ ನೀಡಿ"–ಎಂದು ಪ್ರಾರ್ಥಿಸಿದೆ.–"ದೇಹವೇ ತಾನು ದೇಹಕ್ಕಿಂತ ಅತೀತವಾದ ತತ್ವವೇ ಇಲ್ಲ ಎಂದು ಭಾವಿಸಿಕೊಂಡವರ ಮುಂದೆ ನಮ್ಮಿಂದ ಮಾತುಗಳು ಹೊರಡಲಾರವು"–ಎಂದು ನುಡಿದರು. ಮೌನವನ್ನು ಅವಲಂಬಿಸಿದರು. ಕೊನೆಗೆ ಒಬ್ಬೊಬ್ಬರಾಗಿ ಆಗಂತುಕರು ನಿರ್ಗಮಿಸಿದರು.ಉಳಿದ ಒಬ್ಬಿಬ್ಬರು ಮಂದಿಯ ಜೊತೆಗೆ ಒಂದೆರಡು ಗಂಟೆಗಳ ಕಾಲ ಆತ್ಮಾನುಭವದ ಕುರಿತು ಮಾತನಾಡಿದರು.

ಅನೇಕರು ಅವರ ಸಂದರ್ಶನಕ್ಕೆ ಹೋದಾಗ ಅವರು ಗಂಟೆಗಟ್ಟಲೆ ಮೌನವಾಗಿ ಕುಳಿತಿರುತ್ತಾರೆ. ಯಾರಿಗಾದರೂ ಭಜನೆ ಹಾಡಲು ಸೂಚಿಸುತ್ತಾರೆ. ಭಾವಗೀತೆ ಹಾಡಲು ಪ್ರೋತ್ಸಾಹಿಸುತ್ತಾರೆ.ತಾವು ಸದಾ ಸರ್ವದಾ ಭಾವಾತೀತ ಸ್ಥಿತಿಯಲ್ಲಿಯೇ ನೆಲೆಸಿರುತ್ತಾರೆ.

ಜೀವನದ ಕಷ್ಟ ಸುಖಗಳ ವಿಚಾರಬಂದಾಗ ಅಜ್ಜ ಅನೇಕಬಾರಿ ಕಷ್ಟಗಳು ಸಾಧನೆಗೆ ಪೂರಕ ಎಂದು ಸ್ಪಷ್ಟ ಪಡಿಸಿದ್ದಾರೆ. ಆರ್ಥಿಕ ಮುಗ್ಗಟ್ಟು, ಉದ್ಯೋಗದ ಬವಣೆ, ಆರೋಗ್ಯದ ಸಂಕಟಗಳು ನಮ್ಮನ್ನು ಅಧ್ಯಾತ್ಮದತ್ತ ಮುನ್ನಡೆಸಬೇಕು ಎಂಬುದೇ ಅವರ ತತ್ವ.

ಬಾಹ್ಯವಾಗಿ ನೋಡಿದರೆ ಅಜ್ಜ ಏನೊಂದು ಕರ್ತವ್ಯ, ಕರ್ಮ ಅಂಟದವರು. ಆದರೆ ಆತ್ಮದರ್ಶನದ ಕಾರ್ಯದಲ್ಲಿ ನಾವು ಬಹಳಷ್ಟು ಸಾಧಿಸಬೇಕೆಂಬ ಎಚ್ಚರವನ್ನು ಅವರು ಸದಾ ನೀಡುತ್ತಿದ್ದರು. ಸಾಮಾನ್ಯ ಸಾಧಕರಿಗೆ ಅವರವರು ಇರುವ ಮಟ್ಟದಿಂದ ನಿಧಾನವಾಗಿ ಮುಂದಕ್ಕೆ ಸಾಗಲು ಅಜ್ಜ ಪ್ರೇರಣೆ ನೀಡುತ್ತಿದ್ದರು. ತೀವ್ರಗತಿಯ ಸಾಧಕರಿಗೆ ಎಲ್ಲವನ್ನು ಬಿಟ್ಟು ಸಾಧನೆಯಲ್ಲಿ ಮುಳುಗಲು ಸ್ಫೂರ್ತಿ ನೀಡುತ್ತಿದ್ದರು.

ಒಂದು ಬಾರಿ ಅಜ್ಜ ಮಾತನಾಡುವಾಗ ಈ ರೀತಿ ಹೇಳಿದರು.–" ಜೀವಾತ್ಮನು ಮೊದಲು ತನ್ನ ಸಾಧನೆಯಿಂದ ಪರಮಾತ್ಮ ಆಗಬೇಕು. ಅನಂತರ ಆತನ ನಿಜವಾದ ಸಾಧನೆ ಆರಂಭವಾಗುತ್ತದೆ. ಅನೇಕ ಸಾಧಕರಿಗೆ ಈ ವಿವರಣೆ ಒಗಟಾಗಿ ಕಾಣಬಹುದು. ಶಾಸ್ತ್ರದಲ್ಲಿ ಇದಕ್ಕೆ ತಕ್ಕ ಆಧಾರವಿದೆ. ಈ ವಿಶ್ವದಲ್ಲಿ ಅನೇಕ ಕೋಟಿ ಬ್ರಹ್ಮಾಂಡಗಳಿವೆ.ಒಂದೊಂದು ಬ್ರಹ್ಮಾಂಡಕ್ಕೆ ಒಬ್ಬೊಬ್ಬ ಈಶ್ವರ, ಬ್ರಹ್ಮ, ವಿಷ್ಣು,ಇಂದ್ರ– ಎಲ್ಲಾ ಇದ್ದಾರೆ.

ಹೀಗೆ ಶಾಸ್ತ್ರಗಳ ಅಂತರಾಳದ ಮಾತುಗಳು ಅಜ್ಜನವರ ಮುಖಕಮಲದಿಂದ ನೈಜವಾಗಿ ಸ್ಫುರಿಸುತ್ತಿದ್ದವು. ಶಾಸ್ತ್ರಕ್ಕೆ ಅತೀತವಾದ ಅನೇಕಬಗೆಯ ಸತ್ಯದರ್ಶನ ಅವರ ವಾಣಿಯಲ್ಲಿ ಕಾಣುತ್ತಿತ್ತು.

ಬಾಹ್ಯವಾಗಿ ಅವರು ಯಾರಿಗೂ ಮಂತ್ರೋಪದೇಶ ನೀಡಿಲ್ಲ. ತಾನೇ ಗುರುವೆಂದು ಕರೆಸಿಕೊಂಡಿಲ್ಲ. ಆದರೆ ಅನೇಕರಿಗೆ ಅವರು ಗುರುವಾಗಿ, ಮಾರ್ಗದರ್ಶಕರಾಗಿ, ಸ್ಫೂರ್ತಿಯ ಕಿಡಿಯಾಗಿ ಕಾರ್ಯವೆಸಗಿದ್ದಾರೆ. ಈ ಒಂದು ಅಪೂರ್ವ ಚೇತನದ ಸಾಮೀಪ್ಯವನ್ನು ಸರಸ ಸಂಭಾಷಣೆಯನ್ನು ಆಸ್ವಾದಿಸಲು ಅವಕಾಶ ದೊರೆತ ನಾವೆಲ್ಲರೂ ಭಾಗ್ಯಶಾಲಿಗಳು.

ಇಂತಹ ಅತಿ ಉಚ್ಚವಾದ ಅಧ್ಯಾತ್ಮ ಸ್ತರದಲ್ಲಿದ್ದರೂ ಅಜ್ಜ ವ್ಯಾವಹಾರಿಕವಾಗಿ ಯಾವ ಕರ್ತವ್ಯಗಳನ್ನೂ ಮರೆತವರಲ್ಲ. ಯಾರೇ ಬರಲಿ ಬಹಳ ಆತ್ಮೀಯತೆಯಿಂದ ಬರಮಾಡಿಕೊಳ್ಳುತ್ತಿದ್ದರು. ಊಟ ತಿಂಡಿ ವಸತಿ– ಎಲ್ಲಾ ವ್ಯವಸ್ಥೆಯನ್ನು ಬಹಳ ಸಮರ್ಪಕವಾಗಿ ತಾವೇ ತಿಳಿದು ವಿಚಾರಿಸಿ ನಡೆಸುತ್ತಿದ್ದರು.

"ಇದು ನಿಮ್ಮದೇ ಆಶ್ರಮ– ಆಗಾಗ ಬರುತ್ತಾ ಇರಿ" –ಇಂತ ಸಹೃದಯದ ಬೀಳ್ಕೊಡುಗೆ ಆನಂದಕುಟೀರಕ್ಕೆ ಬಂದವರಿಗೆಲ್ಲಾ ಆಗುತ್ತಿದ್ದ ಅನುಭವ.

ಈಗಲೂ ಕೂಡ ಆನಂದಕುಟೀರ ನಾಡಿನ ದೂರದೂರದ ಭಕ್ತರನ್ನು ಆಕರ್ಷಿಸುತ್ತಿದೆ. ಸಾಧನೆಯ ತಾಣವಾಗಿ ರಾರಾಜಿಸುತ್ತಿದೆ. ಅಜ್ಜನವರ ನೆನಪು ನಮ್ಮೆಲ್ಲರಲ್ಲೂ ಹಸುರಾಗಿರಲಿ.

ಡಾ। ಅಳಿಕೆ ರಾಜಾರಾಮ್